

ಅವರೇ ಬಂದಿದ್ದರು. ಈ ಕೆಲಸಕ್ಕಾಗಿ ಅವರನ್ನು ಪ್ರಶಂಸಿಸಿ ಬಂದ ಫೋನ್ ಕರೆಗಳಿಗಿಂತ ಬೆದರಿಸಿ ತನಿಖೆ ಮಾಡಿದ ಫೋನ್ ಕರೆಗಳೇ ಜಾಸ್ತಿಯಾಗಿದ್ದವು ಎಂದು ಸಾರಾ ಹೇಳಿದ್ದರು. ಇಂತಹ ಬೆದರಿಕೆ ಪತ್ರಗಳಿಗೆ, ಕರೆಗಳಿಗೆ ಕ್ಯಾರೆ ಅನ್ನದ ಸಾರಾ ಅವರ ಧೈರ್ಯವನ್ನು ಮೆಚ್ಚಲೇಬೇಕು. 'ನಾನು ಕೋಮುವಾದಿಗಳಂತೆ ಸಮಾಜದಲ್ಲಿ ದ್ವೇಷದ ಬೀಜವನ್ನು ಬಿತ್ತುತ್ತಿಲ್ಲ. ಶಾಂತಿ ಸೌಹಾರ್ದಕ್ಕಾಗಿ ಬರೆಯುತ್ತಿದ್ದೇನೆ. ನಾನು ನಮ್ಮ ಸಂವಿಧಾನಕ್ಕೆ ವಿರೋಧವಾಗಿ ಏನನ್ನೂ ಮಾಡುತ್ತಿಲ್ಲ. ಆದುದರಿಂದ ನನಗೆ ಸಮಾಜದ ಅನ್ಯಾಯಗಳ ವಿರುದ್ಧ ಮಾತನಾಡುವ ಹಕ್ಕಿದೆ' ಎಂದು ಹೇಳುತ್ತಿದ್ದ ಸಾರಾ, ಧರ್ಮದ ಮುಖವಾಡದ ಮರೆಯಲ್ಲಿರುವ ಕರಾಳ ಮುಖವನ್ನು ಯಾವುದೇ ಮುಲಾಜಿಲ್ಲದೆ ಕಿತ್ತೆಸೆಯಲು ಪ್ರಯತ್ನಿಸಿದರು. ತಾವು ಅನುಸರಿಸುವ ಮುಸ್ಲಿಂ ಧರ್ಮದಲ್ಲಿ ಇರುವ ಉತ್ತಮ ಆಚರಣೆಗಳು, ಧರ್ಮಗ್ರಂಥಗಳಲ್ಲಿರುವ ಅಮೂಲ್ಯವಾದ ಮಾತುಗಳನ್ನು ಗೌರವಿಸುತ್ತಾ, ಜೀವವಿರೋಧಿ ವಿಧಿನಿಯಮಗಳನ್ನು ಪ್ರಶ್ನಿಸುತ್ತಾ, ಪ್ರತಿಭಟಿಸುತ್ತಾ, ಧಿಕ್ಕರಿಸುತ್ತಾ ಸಮಾಜಕ್ಕೆ ನೈಜ ಧರ್ಮವೆಂಬುದನ್ನು ಪ್ರಚುರಪಡಿಸಿದರು. ಮನುಷ್ಯ ತನ್ನ ಧರ್ಮದ ಹೃದಯವನ್ನು ಅರಿತುಕೊಂಡರೆ ಇತರ ಧರ್ಮದ ಹೃದಯವನ್ನೂ ಅರಿತುಕೊಳ್ಳುತ್ತಾನೆ ಎನ್ನುವುದು ಗಾಂಧೀಜಿಯ ಮಾತು. ಈ ಮಾತಿಗೆ ಬದ್ಧರಾಗಿ ಬಾಳಿದವರು ಸಾರಾ. ನಿಜವಾದ ಧಾರ್ಮಿಕ ಪ್ರತಿಭಾವಂತರು, ಮಾನವ ಹೃದಯದ ಶ್ರೀಮಂತಿಕೆಯನ್ನು ಪ್ರತಿನಿಧಿಸಿದವರು. ಸಾರಾ ಅವರ ಪ್ರತಿಭೆ ಸ್ವಯಂಪ್ರಭೆಯುಳ್ಳದ್ದು. ನಿಷ್ಠಾವಂತ ಧಾರ್ಮಿಕ ಅನುಯಾಯಿಯಾಗಿದ್ದ ಸಹೃದಯ ಸಂಪನ್ನರಾದ ಅವರ ಮಾತೃ ಹೃದಯದ ಆಸರೆಯಲ್ಲಿ ಎಲ್ಲಾ ಧರ್ಮದವರು ನೆಮ್ಮದಿಯನ್ನು ಕಾಣಲು ಸಾಧ್ಯವಾಗುತ್ತಿತ್ತು. ಯಾವ ಮತಧರ್ಮಗಳ ಕುರಿತೂ ಅವರು ಜಗಳ ಮಾಡಿಲ್ಲ. ಅವರ ಜಗಳ, ವಾದ ವಿವಾದಗಳೆಲ್ಲಾ ಅಧರ್ಮದ ಜೊತೆಗೆ ಮಾತ್ರ.

ಮೂಲಭೂತವಾದಿಗಳು ಎಲ್ಲಾ ಧರ್ಮದಲ್ಲಿಯೂ ಇದ್ದಾರೆ. ಯಾರಲ್ಲಾದರೂ ಅಂತಹ ಮನೋಭಾವ ವ್ಯಕ್ತವಾದರೆ ಅದನ್ನು ಅಲ್ಲೇ ಖಂಡಿಸಲು ಹಿಂಜರಿಯದ ಸಾರಾ ಬಹಳಷ್ಟು ನೋವು ಅನುಭವಿಸುವಂತಾದರೂ ಮನಸ್ಸಿನಲ್ಲಿರುವ ಸತ್ಯವನ್ನು ಹೇಳದೇ ಬಿಡುವವರಲ್ಲ. ಅನ್ಯಾಯದ ವಿರುದ್ಧ ಯಾವುದೇ ಪ್ರತಿಭಟನೆಗಳಾಗಲೀ, ಚಳವಳಿಗಳಾಗಲೀ, ಮಂಗಳೂರಿನಲ್ಲಿ ನಡೆದರೆ ಸಾರಾ ಅವರ ಪ್ರಾತಿನಿಧ್ಯ ಇದ್ದೇ ಇರುತ್ತಿತ್ತು. ಪ್ರತಿಭಟನಾ ಸಭೆಯಲ್ಲಿ ಅವರು ಎರಡು ಮಾತು ಆಡಿದರೆ ಸಂಘಟನೆಗೆ ಒಂದು ಭೀಮಬಲ ಬಂದಂತಹ ಧೈರ್ಯ ಉಂಟಾಗುತ್ತಿತ್ತು. ಯಾವುದೇ ಆಕ್ರೋಶ ಆಡಂಬರಗಳಿಲ್ಲದೆ ಸರಳ ವಾಕ್ಯಗಳಲ್ಲಿ ಮಾತಾಡುವ ಅವರ ಶೈಲಿಯೇ ವಿಭಿನ್ನ. ಸಂತ್ರಸ್ತ ಹೃದಯಗಳಿಗೆ ತಂಪೆರೆಯುವಂತಹ ಮಾತುಗಳಿರುತ್ತವೆಯೇ